**ಇಂದು ದಿನಾಂಕಃ 30-07-2024 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಅರ್ಜಿದಾರರ ಪರವಾಗಿ ಶ್ರೀ ಎಂ.ಎಸ್.ಎಸ್. ವಕೀಲರಿಂದಃ-**

ನಾನು 10ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ, ಹಿಂದಿ ಹಾಗೂ ಇಂಗ್ಲೀಷ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ.

ಈಗ 7-8 ವರ್ಷಗಳಿಂದ ನಾನು ಹೂವಿನಹಳ್ಳಿ ಗ್ರಾಮದಲ್ಲಿ ವಾಸವಿದ್ದೇನೆ. ನನಗೆ ಉಡುಬಾಳ ಗ್ರಾಮದವರ ಜೊತೆ ಮದುವೆ ಮಾಡಿ ಕೊಟ್ಟಿದ್ದಾರೆ. ಉಡುಬಾಳ ಗ್ರಾಮದಲ್ಲಿ ನನ್ನ ಗಂಡನಿಗೆ ಸಂಬಂಧಪಟ್ಟಂತನಿ ಆಸ್ತಿಗಳು ಇವೆ ಎಂದು ಪ್ರಶ್ನಿಸಿದಾಗ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು ಈಗ ಹೂವಿನಹಳ್ಳಿ ಗ್ರಾಮದಲ್ಲಿ ಕಳೆದ 10 ವರ್ಷಗಳಿಂದ ಅಂಗನವಾಡಿ ಕಾರ್ಯಕರ್ತೆ ಎಂದು ಕೆಲಸ ಮಾಡುತ್ತಿದ್ದೇನೆ. ನನಗೆ 3 ಜನ ಮಕ್ಕಳು ಇದ್ದಾರೆ. ನನ್ನ ಹಿರಿಯ ಮಗ 28 ವರ್ಷ ವಯಸ್ಸಿನವನಾಗಿದ್ದು ಅವನು ಯಾವುದೇ ಕೆಲಸ ಮಾಡುತ್ತಿಲ್ಲ. ನನ್ನ ಎರಡನೇ ಮಗಳು 25 ವರ್ಷ ವಯಸ್ಸಾಗಿದ್ದು ಅವಳು ಎಂಕಾಂ ವಿದ್ಯಾಭ್ಯಾಸ ಮಾಡುತ್ತಿದ್ದಾಳೆ. ಹಾಗೂ ನನ್ನ 3ನೇ ಮಗಳು 7ನೇ ತರಗತಿ ವಿದ್ಯಾಭ್ಯಾಸ ಮಾಡುತ್ತಿದ್ದಾಳೆ. ನಮ್ಮ ಕುಟುಂಬದಲ್ಲಿ ನನ್ನಿಂದ ಮಾತ್ರ ಆದಾಯ ಬರುತ್ತದೆ ಎಂದರೆ ಸರಿ. ಆದರಿಂದ ನಮ್ಮ ಕುಟುಂಬವನ್ನು ನೋಡಿಕೊಳ್ಳುವ ಜವಾಬ್ದಾರಿ ನನ್ನ ಮೇಲಿದ್ದು ಆರ್ಥಿಕ ಸ್ಥಿತಿ ಸರಿಯಿಲ್ಲ ಎಂದರೆ ಸರಿ. ನನಗೆ ಬರುವ ಸಂಬಳ ಮತ್ತು ನನ್ನ ಕುಟುಂಬದ ಖರ್ಚು ಸರಿಸಮವಾಗುತ್ತದೆ ಎಂದರೆ ಸರಿ. ನನಗೆ ಬೇರೆ ಯಾವುದೇ ಆದಾಯ ಇಲ್ಲದಿರುವ ಕಾರಣ ಉಳಿತಾಯ ಮಾಡುವ ಪ್ರಶ್ನೆ ಬರುವುದಿಲ್ಲ ಎಂದರೆ ಸರಿ.

ನನ್ನ ತವರೂರು ಸಹ ಹೂವಿನಹಳ್ಳಿ ಗ್ರಾಮ ಎಂದರೆ ಸರಿ. ನಾನು ಅಂಗನವಾಡಿ ಕಾರ್ಯಕರ್ತೆ ಆಗುವ ಮೊದಲು ನನ್ನ ಕುಟುಂಬ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಗಂಡ ಬಸ್ಸಿನಿಂದ ಬಿದ್ದ ಕಾರಣ ಅವರು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ತವರು ಮನೆಗೆ ಹೋಗಿ ಬರುವುದು ಮಾಡುತ್ತೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಹೋಗುವುದಿಲ್ಲ ಎಂದು ನುಡಿಯುತ್ತಾರೆ. ಈಗ 10 ವರ್ಷಗಳಿಂದ ನನ್ನ ತವರು ಮನೆ ಸಂಬಂಧವನ್ನು ಕಳೆದುಕೊಂಡಿದ್ದೇನೆ.

ನನ್ನ ಮದುವೆಗಿಂತ ಮೊದಲು ತಾರಾಬಾಯಿ ಮತ್ತು ಮಲ್ಲೇಶಪ್ಪ ರವರ ಮದುವೆ ಆಗಿರುತ್ತದೆ. ತಾರಾಬಾಯಿ ರವರು ಮಲ್ಲೇಶಪ್ಪ ರವರ ಮೊದಲನೇ ಹೆಂಡತಿ ಎಂದರೆ ಸರಿ. ಮಲ್ಲೇಶಪ್ಪ ರವರು ತಾರಾಬಾಯಿ ರವರ ಜೊತೆ ಮದುವೆ ಆದ ನಂತರ ಎಷ್ಟು ವರ್ಷಗಳ ನಂತರ ಶಂಕ್ರಮ್ಮ @ ಶಾಂತಮ್ಮ ರವರ ಜೊತೆ ಮದುವೆ ಆಗಿರುತ್ತಾರೆ ಎಂದು ಪ್ರಶ್ನಿಸಿದಾಗ ಸಾಕ್ಷಿ ಎಷ್ಟು ವರ್ಷ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಪುನಃ ಅಂದಾಜು ಎಷ್ಟು ವರ್ಷಗಳ ನಂತರ ಮಲ್ಲೇಶಪ್ಪ ಪುನಃ ಮದುವೆ ಆಗಿದ್ದರು ಎಂದು ಪ್ರಶ್ನಿಸಿದಾಗ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ತಾರಾಬಾಯಿ ರವರಿಗೆ ಉಮಾಕಾಂತ ಎಂಬ ಮಗನಿದ್ದಾನೆ. ಮಲ್ಲೇಶಪ್ಪನ ಎರಡನೇ ಹೆಂಡತಿ ಶಂಕ್ರಮ್ಮ @ ಶಾಂತಮ್ಮ ರವರಿಗೆ 4 ಜನ ಮಕ್ಕಳು. ಅವರು ಶಾಮಸುಂದರ, ಚನ್ನಬಸಮ್ಮ, ವಿಜಯಲಕ್ಷ್ಮೀ ಹಾಗೂ ಪ್ರಕಾಶ. ಮಲ್ಲೇಶಪ್ಪನ 2ನೇ ಹೆಂಡತಿಯ ಮಕ್ಕಳ ವಯಸ್ಸು ನನಗೆ ಗೊತ್ತಿಲ್ಲ. ಮಲ್ಲೇಶಪ್ಪನ 2ನೇ ಹೆಂಡತಿಯ ಮಕ್ಕಳು ಸ್ವಂತ ದುಡಿದು ಆದಾಯ ಮಾಡಿಕೊಳ್ಳುವ ಶಕ್ತಿ ಉಳ್ಳವರು ಆಗಿರುವುದಿಲ್ಲ ಎಂದರೆ ಸಾಕ್ಷಿ ಹೌದು ಅವರು ಶಾಲೆಗೆ ಹೋಗುತ್ತಾರೆ ಎಂದು ನುಡಿಯುತ್ತಾರೆ. ಮಲ್ಲೇಶಪ್ಪನ 2ನೇ ಹೆಂಡತಿಯ ತವರು ಮನೆ ಸೇಡಂ ತಾಲೂಕಿನ ಹಾಬಾಳ ಗ್ರಾಮ ಇರುತ್ತದೆ. ನೀವು ಯಾವಾಗಾದರೂ ಶಂಕ್ರಮ್ಮ ರವರು ತವರು ಮನೆಗೆ ಹೋಗಿದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಹೋಗಿಲ್ಲ ಎಂದು ನುಡಿಯುತ್ತಾರೆ. ಮಲ್ಲೇಶಪ್ಪನ 2ನೇ ಹೆಂಡತಿಯ ತವರು ಮನೆಯ ಆರ್ಥಿಕ ಸ್ಥಿತಿ ಯಾವ ರೀತಿ ಇದೆ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ.

ನನ್ನ ತಂದೆ ಫಕೀರಪ್ಪನಿಗೆ 3 ಜನ ಹೆಂಡತಿಯರು ಮತ್ತು ಒಟ್ಟು 4 ಜನ ಮಕ್ಕಳು. ನಿಮ್ಮ ಒಟ್ಟು ಕುಟುಂಬದ ಆಸ್ತಿ ಎಷ್ಟು ಎಂದು ಪ್ರಶ್ನಿಸಿದಾಗ ಸಾಕ್ಷಿ ನನ್ನ ತಂದೆಯ 40 ಎಕರೆ ಜಮೀನು ಇದೆ ಎಂದು ನುಡಿಯುತ್ತಾರೆ. ಅವುಗಳ ಸರ್ವೆ ನಂ, ನನಗೆ ಗೊತ್ತಿಲ್ಲ. ಸದರಿ 40 ಎಕರೆ ಜಮೀನು ದಾವಾ ಜಮೀನು ಅಥವಾ ಬೇರೆ ಜಮೀನು ಎಂದು ಪ್ರಶ್ನಿಸಿದಾಗ ಸಾಕ್ಷಿ ದಾವಾ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ.

ರಾಯಪ್ಪ ರವರು ನನ್ನ ತಾಯಿಯಾದ ಬಸ್ಸಮ್ಮ ರವರ ಮಗ. ರಾಯಪ್ಪನ ಹೆಸರಿನಲ್ಲಿ ಎಷ್ಟು ಆಸ್ತಿ ಇದೆ ಎಂದು ಪ್ರಶ್ನಿಸಿದಾಗ ಸಾಕ್ಷಿ ಅವರು ಬೇರೆ ಇರುತ್ತಾರೆ ಎಂದು ನುಡಿಯುತ್ತಾರೆ. ರಾಯಪ್ಪನ ಹೆಸರಿನಲ್ಲಿ 40 ಎಕರೆ ಆಸ್ತಿ ಎಂದು ಪ್ರಶ್ನಿಸಿದಾಗ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ರಾಯಪ್ಪನಿಗೆ ಸರ್ವೆ ನಂ. 29 ರಲ್ಲಿ 14 ಎಕರೆ 8 ಗುಂಟೆ, ಸರ್ವೆ ನಂ. 37 ರಲ್ಲಿ 16 ಎಕರೆ 30 ಗುಂಟೆ ಹಾಗೂ ಸರ್ವೆ ನಂ. 37/2 ರಲ್ಲಿ 9 ಎಕರೆ ಇದೆ ಎಂದರೆ ಸಾಕ್ಷಿ ಆಸ್ತಿ ಇದೆ ಆದರೆ ಸರ್ವೆ ನಂ. ಮತ್ತು ವಿಸ್ತೀರ್ಣ ಎಷ್ಟು ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ರಾಯಪ್ಪನ ಹೆಸರಿನಲ್ಲಿರುವ ಆಸ್ತಿಗಳು ಅವನ ಸ್ವಂತ ಆಸ್ತಿ ಅಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ರಾಯಪ್ಪನ ತಂದೆಯಿಂದ ಬಂದಿರುತ್ತದೆ ಎಂದು ನುಡಿಯುತ್ತಾರೆ. ರಾಯಪ್ಪನ ತಂದೆ ಮತ್ತು ನನ್ನ ತಂದೆ ಒಬ್ಬರೇ ಎಂದರೆ ಸರಿ.

ಫಕೀರಪ್ಪನಿಗೆ ಮಲ್ಲೇಶಪ್ಪ, ಬೀರಪ್ಪ, ರಾಯಪ್ಪ ಮತ್ತು ನಾನು ನಾಲ್ಕು ಜನ ಮಕ್ಕಳಿದ್ದೇವೆ ಎಂದರೆ ಸರಿ. ಸಾಕ್ಷಿ ಮುಂದುವರದು ರಾಯಪ್ಪ ಬೇರೆ ತಾಯಿ ಮಗ, ನಾನು, ಬೀರಪ್ಪ ಮತ್ತು ಮಲ್ಲೇಶಪ್ಪ ರವರು ಫಕೀರಪ್ಪನ ಹೆಂಡತಿಯಾದ ಬೀರಮ್ಮರಾದ ಮಕ್ಕಳು ಹಾಗೂ ಲಕ್ಷ್ಮೀಬಾಯಿ ರವರಿಗೆ ಮಕ್ಕಳಿಲ್ಲ ಎಂದು ನುಡಿಯುತ್ತಾರೆ. ಮಲ್ಲೇಶಪ್ಪ ಮತ್ತು ಬೀರಪ್ಪ ರವರ ಮೂಲ ಆದಾಯ ಕೃಷಿ ಇದ್ದು ಬೇರೆ ಯಾವುದೇ ಮೂಲ ಆದಾಯ

ಇರುವುದಿಲ್ಲ ಎಂದು ನುಡಿಯುತ್ತಾರೆ. ಕೃಷಿ ಆದಾಯದಿಂದ ಸ್ವಂತ ಆಸ್ತಿಗಳು ಮಲ್ಲೇಶಪ್ಪ ಮತ್ತು ಬೀರಪ್ಪ ರವರಿಗೆ ಎಷ್ಟು ಎಂದು ಪ್ರಶ್ನಿಸಿದಾಗ ಸಾಕ್ಷಿ ಸ್ವಂತ ಆಸ್ತಿ ಇರುವ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮಲ್ಲೇಶಪ್ಪ ಮತ್ತು ಬೀರಪ್ಪ ರವರಿಗೆ ಮೊದಲು ಎಷ್ಟು ಹೊಲಗಳು ಇದ್ದವು ಮತ್ತು ಈಗ ಎಷ್ಟು ಇದೆ ಎಂದು ಪ್ರಶ್ನಿಸಿದಾಗ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಒಟ್ಟು ಕುಟುಂಬದ ಆಸ್ತಿಯ ಆದಾಯದಿಂದ ಗಳಿಸಿದ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ.

ಸರ್ವೆನಂ. 34/4 4 ಎಕರೆ 4 ಗುಂಟೆ ಜಮೀನು ಯಾರ ಹೆಸರಿನ ಮೇಲೆ ಇದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ. 43 ರ 3 ಎಕರೆ 23 ಗುಂಟೆ ಜಮೀನು ಯಾರ ಹೆಸರಿನ ಮೇಲೆ ಇದೆ ಎಂದು ನನಗೆ ಗೊತ್ತಿಲ್ಲ. ನಿಮ್ಮ ಕುಟುಂಬದಿಂದ ನಿಮ್ಮ ಹೆಸರಿಗೆ ಬಂದಿರುವ ಜಮೀನುಳ ಸರ್ವೆ ನಂ. ಏನು ಎಂದು ಎಂದು ಪ್ರಶ್ನಿಸಿದಾಗ ಸಾಕ್ಷಿ ಕುಟುಂಬದಿಂದ ನನಗೆ ಯಾವುದೇ ಆಸ್ತಿ ಬಂದಿಲ್ಲ ಎಂದು ಎಂದು ನುಡಿಯುತ್ತಾರೆ. ಮೇಲೆ ಹೇಳಿರುವ ಸರ್ವೆ ನಂ. 34/4 ಮತ್ತು 43 ರ ಜಮೀನು ಒಟ್ಟು ಕುಟುಂಬದ ಆಸ್ತಿ ನನ್ನ ಹೆಸರಿಗೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿ. ನಿಮ್ಮ ಹೆಸರಿನ ಮೇಲೆ ಯಾವುದಾದರೂ ಜಮೀನು ಇದೆಯೆ ಎಂದು ಪ್ರಶ್ನಿಸಿದಾಗ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀಸವಾಲು ಮುಂದೂಡಲಾಯಿತು.

**ಮರುವಿಚಾರಣೆಃ ಇಲ್ಲಾ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**